ಎಂ.ವಿ.ಸಿ ನಂಬರ್ಃ 34/2025 ಪಿ ಡಬ್ಲ್ಯೂಃ 1

**ದಿಃ24.10.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಮ್. ವೈ. ಬಿ ವಕೀಲರಿಂದ ಃ**

ಆದ್ದರಿರಂದ ನಾನು ಅರ್ಜಿಯಲ್ಲಿ ಕೋರಿದಂತೆ ಪರಿಹಾರ ಕೊಡಿಸಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ.ಡಿ.ಡಿ. ವಕೀಲರಿಂದ ಃ**

ಅಪಘಾತ ಕಾಲಕ್ಕೆ ನಾನು ಕುಶಾಲನಗರ ತಾಲ್ಲೂಕು ಗಂಧದ ಕೋಟೆ ಬಳಿ ಇರುವ ಮಡಿಕೇರಿ–ಕುಶಾಲನಗರ ರಸ್ತೆ ಪಕ್ಕದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದೆ. ಅಪಘಾತ ಸಂಭವಿಸಿತು ಎನ್ನಲಾದ ಸ್ಥಳದಲ್ಲಿರುವ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ನಾನು ಅಪಘಾತ ಕಾಲಕ್ಕೆ ಕುಶಾಲನಗರದಿಂದ ಮಡಿಕೇರಿಗೆ ಬರುವ ರಸ್ತೆಯ ಎಡ ಬದಿಯಲ್ಲಿ ನಿಂತಿದ್ದೆ. ಅಪಘಾತ ಸ್ಥಳದಲ್ಲಿ ಯಾವುದೇ ಬಸ್ಸು ತಂಗುದಾಣ ಇಲ್ಲ. ಅಪಘಾತ ಸಂಭವಿಸಿದೆ ಎಂದು ಹೇಳಲಾದ ಸ್ಥಳದಲ್ಲಿ ಸಾಕಷ್ಟು ಅಂಗಡಿ ಮತ್ತು ವಾಸದ ಮನೆಗಳು ಇವೆ. ಅಪಘಾತ ಸ್ಥಳದಲ್ಲಿ ಸಾಕಷ್ಟು ಜನರು ಓಡಾಡುತ್ತಿರುತ್ತಾರೆ. ಮಡಿಕೇರಿ–ಕುಶಾಲನಗರ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿರುವುದರಿಂದ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಅಪಘಾತ ಪಡಿಸಿದ ಕಾರು ಮಡಿಕೇರಿ ಕಡೆಯಿಂದ ಕುಶಾಲನಗರ ಕಡೆ ಹೋಗುತ್ತಿತ್ತು. ಅಪಘಾತ ಪಡಿಸಿದ ವಾಹನ ಯಾವ ಕಡೆಯಿಂದ ಬಂತು ಎಂದು ನಾನು ಗಮನಿಸಿಲ್ಲ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಅಪಘಾತ ಸ್ಥಳದಲ್ಲಿ ಬೇರೆ ಯಾರೂ ಇರಲಿಲ್ಲ. ಆಪಾದಿತ ವಾಹನ ನನಗೆ ಡಿಕ್ಕಿ ಹೊಡೆದಿದ್ದರಿಂದ ನಾನು ಕೆಳಗೆ ಬಿದ್ದೆ. ಈ ಅಪಘಾತ ನನ್ನ ನಿರ್ಲಕ್ಷ್ಯ ತನದಿಂದ ರಸ್ತೆ ದಾಟುತ್ತಿದ್ದಾಗ ಸಂಭವಿಸಿದೆ ಎಂದರೆ ಸರಿಯಲ್ಲ. ನಾನು ಮುಂಜಾಗ್ರತೆ ವಹಿಸದೆ ಅಜಾಗರೂಕತೆಯಿಂದ ರಸ್ತೆ ದಾಟುತ್ತಿದ್ದಾಗ ಈ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಆಪಾದಿತ ಕಾರನ್ನು ಮಹಮ್ಮದ್ ನಿಶಾಲ್ ಈತ ಚಾಲನೆ ಮಾಡುತ್ತಿದ್ದ. ಅಪಘಾತ ಕಾಲಕ್ಕೆ ಆತನಿಗೆ ವಾಹನ ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿ.

ಅಪಘಾತ ಸಂಭವಿಸಿದ ಕೂಡಲೇ ನಾನು ಕುಶಾಲನಗರದಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಸಾಕ್ಷಿ ಮುಂದುವರೆದು ಆ ನಂತರ ಮಡಿಕೇರಿಗೆ ಬಂದು ಚಿಕಿತ್ಸೆ ಪಡೆದೆ ಎನ್ನುತ್ತಾರೆ. ನನಗೆ ಅಪಘಾತದಲ್ಲಿ ನಾನು ಹೇಳಿದಂತೆ ಯಾವುದೇ ಗಾಯ ಆಗಿಲ್ಲ ಎಂದರೆ ಸರಿಯಲ್ಲ. ನಾನು ಕುಶಾಲನಗರ ಮತ್ತು ಮಡಿಕೇರಿಯಲ್ಲಿ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾಪೋಕ್ಲು ನಂದಿನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಅಪಘಾತ ಪೂರ್ವದಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದೆ. ಕಾವೇರಿ ಟೆಕ್ಸ್ ಟೈಲ್ ನನಗೆ ಸೇರಿದ್ದು. ಸದರಿ ಟೈಕ್ಸ್ ಟೈಲ್ ಗಂಧದ ಕೋಟೆಯಲ್ಲಿ ಇದೆ. ಟೈಲರಿಂಗ್ ಉದ್ಯಮ ನಡೆಸಲು ನಾನು ಸಂಬಂಧಪಟ್ಟ ಪ್ರಾಧಿಕಾರದಿಂದ ಪರವಾನಗಿ ಪಡೆದಿಲ್ಲ. ನಾನು ಕಾವೇರಿ ಟೆಕ್ಸ್ ಟೈಲ್ ಉದ್ಯಮವನ್ನು ನಡೆಸಿದ್ದೆ ಮತ್ತು ನಾನು ಟೈಲರಿಂಗ್ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಂದುದ ಮುಂದೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಟೈಲರಿಂಗ್ ಕೆಲಸದಿಂದ ನನಗೆ ಪ್ರತಿ ತಿಂಗಳು 30,000/- ರೂ. ವರಮಾನ ಇತ್ತು ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಿಲ್ಲ. ನಾನು ಕಾವೇರಿ ಟೆಕ್ಸ್ ಟೈಲ್ ಉದ್ಯಮ ನಡೆಸುತಿತದ್ದೆ ಮತ್ತು ನನಗೆ ಟೈಲರಿಂಗ್ ಕೆಲಸದಿಂದ ತಿಂಗಳಿಗೆ 30,000/- ರೂ. ಆದಾಯ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲಲ. ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ದಾಖಲೆಗಳನ್ನು ಸುಳ್ಳಾಗಿ ಸೃಷ್ಟಿ ಮಾಡಿ ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತದಲ್ಲಿ ನನಗಾದ ಗಾಯಗಳು ವಾಸಿಯಾಗಿದೆ. ನಾನು ಆರೋಗ್ಯಳಾಗಿದ್ದು ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಬಲ್ಲೆ ಎಂದರೆ ಸರಿಯಲ್ಲ. ನನಗೆ

ಎಂ.ವಿ.ಸಿ ನಂಬರ್ಃ 34/2025 ಪಿ ಡಬ್ಲ್ಯು: 1

ಅಪಘಾತದಲ್ಲಾದ ಗಾಯಗಳಿಂದಾಗಿ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. 3ನೇ ಎದುರುದಾರರ ಸಂಸ್ಥೆ ನನಗೆ ಪರಿಹಾರ ಕೊಡಲು ಬಾಧ್ಯಸ್ತ ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.